


# ಕಾರ್ ಕಾರ್ ಕಾರ್... ಎಲ್ನೋಡಿ ಕಾರ್...




**ರಸ್ತೆಯಲ್ಲಿ ಕಾರುಗಳ ಸಾಲು ಕಾಣಬಹುದು. ಆದರೆ, ಹೈದರಾಬಾದ್‌ನ ಸಂಗ್ರಹಾಲಯವೊಂದರಲ್ಲಿ 500ಕ್ಕೂ ಹೆಚ್ಚು ಕಾರುಗಳಿವೆ. 'ಕಾರ್ ಕಾರ್ ಎಲ್ನೋಡಿ ಕಾರ್' ಎನ್ನುವ ಸಿನಿಮಾ ಹಾಡಿನ ಸಾಕಾರರೂಪದಂತೆ ಕಾಣಿಸುವ ಈ ಮ್ಯೂಸಿಯಂನಲ್ಲಿ ಚಲನಶೀಲತೆ ಪಡೆದಿರುವ ವಿವಿಧ ರೂಪಗಳು ಅಚ್ಚರಿ ಹುಟ್ಟಿಸುವಂತಿವೆ.**

■ ಪ್ರಕಾಶ ಎಸ್. ಮನ್ನಂಗಿ
ಚಿತ್ರಗಳು: ಆಕಾಶ

ಸುಧಾಕರ್ ಎಂಬ ಹದಿನಾಲ್ಕು ವರ್ಷ ವಯಸ್ಸಿನ ಹುಡುಗ ಬೈಸಿಕಲ್ಲಿನ ನಕ್ಷೆ ಬಿಡಿಸಿದ. ತನ್ನ 15ನೇ ವಯಸ್ಸಿಗೆ ಸುಲಭವಾಗಿ ಸವಾರಿ ಮಾಡಬಹುದಾದ ಮೋಟರ್ ಸೈಕಲ್ಲಿನ ನಕ್ಷೆ ರಚಿಸಿದ. ಇಂಟರ್ ಮೀಡಿಯಟ್‌ನಲ್ಲಿದ್ದಾಗಲೇ ಆತ ರಚಿಸಿದ ಮೊದಲ ಕಾರಿನ ನೀಲನಕ್ಷೆ ಅನಾವರಣಗೊಂಡಿತು. ಅನಂತರ ಆತನಿಗೆ ನಾಲ್ಕು ಚಕ್ರಗಳ ವಾಹನಗಳತ್ತ ಒಲವು ಮೂಡಿತು. ಆತನ ಈ ಹವ್ಯಾಸವೇ ಇಂದಿನ ಹೈದರಾಬಾದಿನ 'ಸುಧಾ ಕಾರ್ ಮ್ಯೂಸಿಯಂ'ಗೆ ನಾಂದಿಯಾಯಿತು.

ಈ ಮ್ಯೂಸಿಯಂ ಜಗತ್ತಿನಲ್ಲೇ ವಿಸ್ಮಯಕಾರಿ. ಕೈಯಿಂದಲೇ ತಯಾರಿಸಿದ ಕಾರ್ ಮ್ಯೂಸಿಯಂ ಎನ್ನಬಹುದು. ಇದು ಹೈದರಾಬಾದಿನಲ್ಲಿರುವ ಸೃಜನಾತ್ಮಕ, ಕಲಾತ್ಮಕವಾಗಿರುವ ಕಾರುಗಳ ಸಂಗ್ರಹವಾಗಿದೆ.

ಸುಧಾಕರ್ 41 ಅಡಿ ಎತ್ತರದ ಟ್ರೈಸಿಕಲ್ಲನ್ನು ರಚಿಸಿ ಹೈದರಾಬಾದಿನ ರಸ್ತೆಗಳಲ್ಲೆಲ್ಲ ಸವಾರಿ ಮಾಡಿದರು. ಇದು 2005ರಲ್ಲಿ ಗಿನ್ನಿಸ್ ದಾಖಲೆ ಪುಸ್ತಕ ಸೇರಿತು. ಭಾರತದಲ್ಲೇ ಅತ್ಯಂತ ಚಿಕ್ಕದಾದ, ಕೇವಲ 10 ಜನ ಕೂಡಬಹುದಾದ ರೈಲುಬಂಡಿಯನ್ನೂ ರಚಿಸಿದರು. ಇದು 19 ಅಡಿ ಉದ್ದವಾಗಿದ್ದು, ಕೇವಲ 20 ದಿನಗಳಲ್ಲಿ ರೂಪ ತಳೆಯಿತು.

ಇಲ್ಲಿನ ಹೊಸತನಕ್ಕೆ ಯಾವುದೂ ಸರಿಸಾಟಿಯಾಗುವುದಿಲ್ಲ. ದಟ್ಟ ಬಣ್ಣದ, ವಿವಿಧ ವಿನ್ಯಾಸದ, ಆಕಾರದ 500ಕ್ಕೂ ಹೆಚ್ಚು ಕಾರುಗಳು, 50ಕ್ಕೂ ಹೆಚ್ಚು ಬೈಸಿಕಲ್ಲುಗಳು ಮತ್ತು 12ಕ್ಕೂ ಹೆಚ್ಚು ಮೋಟರ್ ಬೈಕುಗಳು ಸೋಜಿಗವನ್ನುಂಟು ಮಾಡದೇ ಇರವು.

ಇಲ್ಲಿ ಮೂರು ವಿಧದ ಕಾರುಗಳನ್ನು ಕಾಣಬಹುದು. ಸೃಜನಾತ್ಮಕ ಕಾರುಗಳು, ವಾಣಿಜ್ಯ ಕಾರುಗಳು ಮತ್ತು ಷೋಕೇಸಿನಲ್ಲಿ ಇಡಬಹುದಾದ ಕಾರುಗಳು. ಇವುಗಳನ್ನೆಲ್ಲ ಮೂರು ವಿಶಾಲವಾದ ಸಭಾಂಗಣಗಳಲ್ಲಿ ಜೋಡಿಸಲಾಗಿದೆ. ಪ್ರತಿಯೊಂದೂ ಮಾದರಿಯ ಮುಂದೆ ಫಲಕವೊಂದರಲ್ಲಿ ಅದು ತಯಾರಾದ ವರ್ಷ, ಅದರ ವೇಗ, ಸಾಮರ್ಥ್ಯ ಕುರಿತ ವಿವರಗಳಿವೆ.

ವಿವಿಧ ಸಂದರ್ಭಗಳ ಔಚಿತ್ಯಕ್ಕಾಗಿಯೂ ಇವನ್ನೆಲ್ಲ ರಚಿಸಲಾಗಿದೆ. 'ಅಂತರರಾಷ್ಟ್ರೀಯ ಮಹಿಳಾ ದಿನ'ದ ನೆನಪಿಗೆ ಲಿಪ್‌ಸ್ಟಿಕ್ ಕಾರು, ಆಭರಣ ಕಾರು, ಕರವಸ್ತ್ರ ಕಾರು, ಹ್ಯಾಂಡ್‌ಬ್ಯಾಗ್ ಕಾರು, ಮುದ್ದಾದ ಮದುವಣಗಿತ್ತಿಯ ವೇಷಭೂಷಣದ ಕಾರು, ಕಠಾರಿಯ ಆಕಾರದ ಹಿಮ್ಮಡಿಯ ಕಾರುಗಳು ಹೊರಬಂದರೆ; 'ಮಕ್ಕಳ ದಿನಾಚರಣೆ'ಗಾಗಿ ಪೆನ್ಸಿಲ್ ಕಾರು, ಪೆನ್ನಿನ ಕಾರು, ಇಂಕ್ ಇರೇಸರ್ ಕಾರು, ಬುಕ್ ಕಾರು ಮತ್ತು ಶಾರ್ಪನರ್ ಕಾರುಗಳು ಬೆಳಕು ಕಂಡವು. 'ಜಾಗತಿಕ ಏಡ್ಸ್ ದಿನಾಚರಣೆ'